ನಿರಾಶಾವಾದದ ನೆರಳು ಅವರ ಮೇಲೂ ಬಿದ್ದಿದೆ. ಯಾಂತ್ರಿಕ ಬದುಕಿನ ನೀರಸತೆಯ ಬೇಸರ ಅವರ ಕಾವ್ಯಲಯದ ಮೇಲೆ ಪರಿಣಾಮ ಬೀರಿದೆ. ಆದರೆ, ಇದು ಅವರನ್ನು ಸಿನಿಕರಾಗಿಸಲಿಲ್ಲ. ಜಿ.ಎಸ್. ಆಮೂರ ಅವರು ಗುರ್ತಿಸುವಂತೆ, 'ನವ್ಯ ಕಾವ್ಯದ ಅಗ್ನಿದಿವ್ಯದಲ್ಲಿ ಕಣವಿಯವರ ಕಾವ್ಯ ತನ್ನ ಆಶಯಆಕಾರಗಳ ಮುಗ್ಧತೆಯನ್ನು ಕಳೆದುಕೊಂಡು ಪ್ರಬುದ್ಧತೆಯನ್ನು ದೊರಕಿಸಿಕೊಂಡಿತು. ಸೌಂದರ್ಯಪಕ್ಷಪಾತದ ಜೋಲಿಯಿಂದ ಸುಧಾರಿಸಿಕೊಂಡು ಅಸುಂದರವಾದುದರ, ಅಸಹ್ಯವಾದುದರ ಅರ್ಥವಂತಿಕೆಯನ್ನು ಗ್ರಹಿಸಿ ಜೀವನವನ್ನು ಸಮಗ್ರವಾಗಿ ನೋಡುವ ಸಂಕೀರ್ಣ ದೃಷ್ಟಿಯನ್ನು ಪಡೆದುಕೊಂಡಿತು. ಆದರೆ, ತನ್ನ ಮೂಲದ್ರವ್ಯವಾದ ಜೀವಸತ್ವದ ಶ್ರದ್ಧೆಯನ್ನಾಗಲೀ, ಸೃಜನಶೀಲತೆಯ ಲವಲವಿಕೆಯನ್ನಾಗಲೀ ಕಳೆದುಕೊಳ್ಳಲಿಲ್ಲ'.

ಕಣವಿಯವರ ಒಂದು ಸಂಕಲನದ ಹೆಸರು 'ನೀವೇ ಪ್ರಮಾಣು'. ಇದನ್ನು ಅವರು ವಚನಸಾಹಿತ್ಯದಿಂದ ಆರಿಸಿಕೊಂಡಿದ್ದಾರೆ. ಅಲ್ಲಮ, ಬಸವಣ್ಣ ಇಬ್ಬರಲ್ಲೂ ಈ ಪ್ರಯೋಗವಿದೆ. ಅಲ್ಲಮ 'ಗುಹೇಶ್ವರನೆಂಬುದು ಅಪ್ರಮಾಣು' ಎನ್ನುತ್ತಾನೆ. ಅಲ್ಲಮ ಅನುಭಾವ ಜಗತ್ತಿನ ಉನ್ನತ ನೆಲೆಯ ಪ್ರತಿನಿಧಿ. ಈ ಲೋಕದ ಹಂಗು ತೊರೆದವನು. ಈ ಲೋಕದಲ್ಲಿ ಇದ್ದೂ ಇಲ್ಲದಂತಿರುವವನು. ಆತ್ಯಂತಿಕ ಸತ್ಯ ಇಹದ ಎಲ್ಲ ಮಾನದಂಡಗಳನ್ನೂ ಮೀರಿದ್ದೆನ್ನುವ ನಿಲವು ಅಲ್ಲಮನದು. ಆದ್ದರಿಂದಲೇ ಅವನಿಗೆ ಗುಹೇಶ್ವರನೆಂಬುದು ಅಪ್ರಮಾಣು. ಆದರೆ, ಬಸವಣ್ಣ 'ಕೂಡಲ ಸಂಗಮ ನೀವೇ ಪ್ರಮಾಣು' ಎನ್ನುತ್ತಾನೆ. ಬಸವಣ್ಣನೂ ಅನುಭಾವದಲ್ಲಿ ಆಸಕ್ತ, ಮಹಾಭಕ್ತ. ಆದರೆ, ಆತನ ಭಕ್ತಿಗೆ ಸಾಮಾಜಿಕ ಆಯಾಮವಿದೆ. 'ಕಳಬೇಡ ಕೊಲಬೇಡ' ಎಂಬ ವಚನದ ಕಡೆಯ ಸಾಲು 'ಇದೇ ನಮ್ಮ ಕೂಡಲ ಸಂಗಮದೇವನ ಒಲಿಸುವ ಪರಿ' ಎಂಬುದು ಬಸವಣ್ಣ ಸಾಮಾಜಿಕ ಮೌಲ್ಯಗಳನ್ನು ಧಾರ್ಮಿಕ ಮೌಲ್ಯಗಳನ್ನಾಗಿ ರೂಪಾಂತರಿಸುವ ಬಗೆಗೆ ಅತ್ಯುತ್ತಮ ನಿದರ್ಶನ. ಅಂದರೆ ಬಸವಣ್ಣನಿಗೆ ಮೋಕ್ಷವೆಂಬುದು ಇಲ್ಲಿಯೇ, ಈ ಲೋಕದಲ್ಲಿಯೇ ಇದ್ದು ಸಾಧಿಸಬೇಕಾದಂಥದು. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು. ಬಸವಣ್ಣನ ವಸ್ತುಪ್ರಪಂಚ ಬೆಡಗಿನ ಲೋಕವಲ್ಲ, ಜನಸಾಮಾನ್ಯರ ಜಗತ್ತು.



ಅಲ್ಲಮ, ಬಸವಣ್ಣ ಎರಡು ಭಿನ್ನ ಮಾದರಿಗಳು. ಕಣವಿಯವರಿಗೆ ನಿಸ್ಸಂದೇಹವಾಗಿ ಬಸವಣ್ಣ ಮಾದರಿ. ತಮ್ಮ ಕಾವ್ಯ ಈ ಲೋಕದೊಂದಿಗೆ ಎಷ್ಟರಮಟ್ಟಿಗೆ ಸಂಬಂಧ ಸೃಷ್ಟಿಸಿಕೊಳ್ಳುತ್ತದೆಯೋ ಅಷ್ಟರಮಟ್ಟಿಗೆ ಅದು ಸಾರ್ಥಕ ಎಂದು ಅವರು ನಂಬಿದ್ದರು. ಬಸವಣ್ಣನ ಭಕ್ತಿಗೆ ಸಾಮಾಜಿಕ ಆಯಾಮವಿದ್ದಂತೆ ಕಣವಿಯವರ ಕಾವ್ಯಶ್ರದ್ಧೆಗೆ ಸಾಮಾಜಿಕ ತುಡಿತವಿತ್ತು. 'ಶ್ರಾವಣದ ಮೋಡದ ರೀತಿ: ಅವಸರದ ಪ್ರೀತಿ / ಕಾರ್ತಿಕದಲ್ಲಿ ಪೂರ್ತಿ ಬೇರೆ ತರಹ. ಬೆಟ್ಟದ / ಹಾಗೆ ಗಟ್ಟಿಯಾಗಿ ಒಂದೆಡೆ ನಿಂತು, ಮೆಲ್ಲಗೆ / ಅರಳಿ, ಹಲವು ಬಗೆ ಶಿಲ್ಪದಲಿ ಕಡೆದ ಪ್ರತಿಮೆ / ಗೆಲ್ಲುಪಮೆ? ಸಂಜೆ ಸೂರ್ಯನ ಬಣ್ಣದೋಕುಳಿಗೆ / ಅಪೂರ್ವ ಜೀವಕಳೆ, ನಿಮಿಷ ನಿಮಿಷಕ್ಕೊಂದು / ಭಂಗಿ, ಕಪ್ಪಗೆ ನೆಲಕೆ ಕಾಲೂರುವುದು / ಮಳೆ. ಕತ್ತಲಾದಂತೆ ಮಿಂಚು